ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ.ವಿವಾದ/73/2015-16 ದಿನಾಂಕ:೮/08/2016

**ಉಪಸ್ಥಿತರು:** ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1. ಬಿ.ಕೆ.ಪಾರ್ವತಮ್ಮ<br>ಗಂಡ ದಿವಂಗತ ಚಿದಾಂಬರ ಶಾಸ್ತ್ರೀ<br>ಬಲಕುಂದಿ ಗ್ರಾಮ ಸಿರುಗಪ್ಪ ತಾಲೂಕು | 1. ಪಿ.ರಾಮರಾಜು<br>ತಂದೆ ನರಸಿಂಹರಾಜು<br>ಬಂಗಾರ ಕ್ಯಾಂಪ್, ಬಲಕುಂದಿ<br>ಗ್ರಾಮ ಸಿರುಗುಪ್ಪ ತಾಲೂಕು |

**ದಾವಾ ಜಮೀನಿನ ವಿವರ:**

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಬಲಕುಂದಿ ಗ್ರಾಮ | 239/ಬಿ3<br>239/ಇ | 2.13<br>2.70 | ಹೆಚ್ 18/2015-16 | 133/2015-16 |

**ಪೀಠಿಕೆ:**

ಸಿರುಗುಪ್ಪ ತಾಲೂಕಿನ ಬಲಕುಂದಿ ಗ್ರಾಮದ ಸರ್ವೆ ನಂ: 239ಬಿ/3 ವಿಸ್ತೀರ್ಣ:2.13 ಮತ್ತು 239/ಇ ವಿಸ್ತೀರ್ಣ 2.70 ಎಕರೆ ಜಮೀನುಗೆ ಸಂಬಂಧಿಸಿದಂತೆ ಪೋತಿ ಪಟ್ಟ ಪ್ರಕಾರ ಬಿ.ಕೆ.ಪಾರ್ವತಮ್ಮ ಗಂಡ ದಿವಂಗತ ಚಿದಾಂಬರ ಶಾಸ್ತ್ರೀ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಪಿ.ರಾಮರಾಜು ತಂದೆ ನರಸಿಂಹರಾಜು ಬಂಗಾರ ರಾಜು ಕ್ಯಾಂಪ್ ಬಲಕುಂದಿ ಗ್ರಾಮ ಇವರು ದಿನಾಂಕ: 05-01-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 13/05/2016, 03/06/2016, 17/06/2016 ಮತ್ತು 01-07-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ಬಿ.ಕೆ.ಪಾರ್ವತಮ್ಮ ಗಂಡ ದಿವಂಗತ ಬಿ.ಕೆ. ಚಿದಾಂಬರ ಶಾಸ್ತ್ರೀ ಬಲಕುಂದಿ ಗ್ರಾಮ ಹಾಲಿ ವಾಸ ...ನೂರು ಗ್ರಾಮ ಕರ್ನೂಲ್ ಜಿಲ್ಲೆ ಇವರು ಬಲಕುಂದಿ ಗ್ರಾಮದ ಸರ್ವೆ ನಂಬರಗಳಾದ 239ಬಿ/3 ವಿಸ್ತೀರ್ಣ 2.13 ಮತ್ತು ...9/ಇ ವಿಸ್ತೀರ್ಣ 2.70 ಎಕರೆ ಜಮೀನು ಬಿ.ಕೆ. ಚಿದಾಂಬರ ಶಾಸ್ತ್ರೀ ಯವರ ಹೆಸರಿಗೆ ಪಟ್ಟ ಇದ್ದು ಸದರಿಯವರು ದಿನಾಂಕ 22-10-2015 ರಂದು ಮರಣ ಹೊಂದಿದ ಕಾರಣ ಪೋತಿಪಟ್ಟ ಬದಲಾವಣೆ ಮಾಡಲು ದಿನಾಂಕ 01-12-2015 ರಂದು ಅರ್ಜಿ ಸಲ್ಲಿಸಿದ್ದೇನೆ ಪ್ರತಿವಾದಿಯಾದ ಪಿ.ರಾಮರಾಜು ತಂದೆ ಪಿ.ನರಸಿಂಹರಾಜು ಇವರು ತಕರಾರು ಸಲ್ಲಿಸಿರುತ್ತಾರೆ ಚಿದಾಂಬರ ಶಾಸ್ತ್ರೀ ತಂದೆ ಗೋವಿಂದ ಶಾಸ್ತ್ರೀ ಇವರು ನನಗೆ ಪತಿಯಾಗಿರುತ್ತಾರೆ ನನಗೆ ತಿಳಿಯದೆ ಹಾಗೆ ಅವರ ಜೀವಿತ ಅವಧಿಯಲ್ಲಿ ಕ್ರಯ, ದಾನ ಜಿ.ಪಿ.ಎ. ಯಾರಿಗೂ ಯಾವುದೇ ತರಹದ ನೊಂದಣಿ ಮಾಡಿ ಕೊಟ್ಟಿರುವುದಿಲ್ಲ ಪ್ರತಿವಾದಿ ಸಲ್ಲಿಸಿರುವ ಕಡತಗಳು ಈ ಒಂದು ಪೋತಿ ಪಟ್ಟಕ್ಕೆ ಸಂಬಂದ ಇರುವುದಿಲ್ಲ ಪ್ರತಿವಾದಿ ಸಲ್ಲಿಸಿದ ತಕರಾರು ರದ್ದು ಮಾಡಿ ನಾನು ಕೊಟ್ಟಿರುವ ಪೋತಿ ವಾರಸುದಾರರ ಪ್ರಕಾರ ಸದರಿ ಭೂಮಿಗಳನ್ನು ನನ್ನ ಹೆಸರಿಗೆ ಪಟ್ಟ ಬದಲಾವಣೆ ಮಾಡಿಕೊಡಬೇಕೆಂದು ಲಿಖಿತ ಹೇಳಿಕೆಯನ್ನು ಸಲ್ಲಿರುತ್ತಾರೆ.

<u>ಪ್ರತಿವಾದಿಗಳು</u>

ಪ್ರತಿವಾದಿಗಳಾದ ಪಿ.ರಾಮರಾಜು ತಂದೆ ಪಿ.ನರಸಿಂಹರಾಜು ಬಂಗಾರು ಕ್ಯಾಂಪ್ ಬಲಕುಂದಿ ಗ್ರಾಮ ಇವರು ಕರೂರು ಗ್ರಾಮದ ಸರ್ವೆ ನಂಬರಗಳಾದ 239ಬಿ/3 ವಿಸ್ತೀರ್ಣ 2.13 ಮತ್ತು 239/ಇ ವಿಸ್ತೀರ್ಣ 2.70 ಎಕರೆ ಜಮೀನು ಬಿ.ಕೆ. ಚಿದಾಂಬರ ಶಾಸ್ತ್ರೀ ಹೆಸರಿಗೆ ಪಟ್ಟ ಇರುತ್ತದೆ ಸದರಿ ಬಿ.ಕೆ.ಚಿದಾಂಬರ ಶಾಸ್ತ್ರೀಯವರು ನನಗೆ ಜಮೀನುಗಳು ಖರಿದಿಗೆ ಕೊಟ್ಟಿರುತ್ತಾರೆ ಸದರಿ ಭೂಮಿಯು ಇನಾಂ ಭೂಮಿಯಾಗಿರುವುದರಿಂದ ನೊಂದಣಿಯಾಗಿರುವುದಿಲ್ಲ ಕಾರಣ ಸದರಿ ಭೂಮಿಯು ಸಿರುಗುಪ್ಪ ಉಪ-ನೋಂದಣಿ ಕಛೇರಿಯಲ್ಲಿ ನೋಂದಾಯಿತ ಜಿ.ಪಿ.ಎ. ಸಂಖ್ಯೆ 11/85-86 ದಿನಾಂಕ 28-05-1985 ರಂದು ನೋಂದಾಣಿ ಮತ್ತು ನನ್ನ ಸ್ವಾಧೀನ ಮತ್ತು ಅನುಭವಕ್ಕೆ ಬಿಟ್ಟು ಕೊಟ್ಟಿರುತ್ತಾರೆ ಅಂದಿನಿಂದ ಇಂದಿನ ವರಿಗೂ ಸದರಿ ಭೂಮಿಯು ಸ್ವಾದೀನ ಮತ್ತು ಅನುಭವದಲ್ಲಿ ಇರುತ್ತದೆ ಬಿ.ಕೆ. ಚಿದಾಂಬರ ಶಾಸ್ತ್ರೀ ಇವರ ಜಿ.ಪಿ.ಎ. ಪ್ರಕಾರ ಭ್ಯೂ ನ್ಯಾಯ ಮಂಡಳಿ ಸಿರುಗುಪ್ಪ ಇವರಿಗೆ ಫಾರಂ-1 ಸಲ್ಲಿರುತ್ತೇನೆ ಸದರಿ ಫಾರಂ-1 ಸಲ್ಲಿಸಿದ ಪ್ರಕಾರ ಭ್ಯೂ ನ್ಯಾಯ ಮಂಡಳಿ ಸಿರುಗುಪ್ಪ ಇವರು ಕುಲಂಕುಷವಾಗಿ ಪರಿಶೀಲಿಸಿ ಕಂ/ಇನಾಂ/30/1991-1992 ಫಾರಂ-2 ಕೋಟ್ಟಿರುತ್ತಾರೆ ಆದರೆ ಸದರಿ ಬಿ.ಕೆ.ಚಿದಾಂಬರ ಶಾಸ್ತ್ರೀಯವರು ದಿನಾಂಕ 22-10-2014 ರಂದು ಮರಣ ಹೊಂದಿರುತ್ತಾರೆ ಸದರಿ ಬಿ.ಕೆ. ಚಿದಾಂಬರ ಶಾಸ್ತ್ರೀಯವರು ಬರೆದು ಕೊಟ್ಟಿರುವ ಜಿ.ಪಿ.ಎ. ಅಂದಿನಿಂದ ಮರಣ ಹೊಂದುವವರೆಗೆ ಯಾವುದೇ ತರಹದ ಸ್ವಾದೀನ ಹಾಗೂ ಭೂ ತಕರಾರು ಬಂದಿರುವುಲ್ಲ ಸದರಿ ಭೂಮಿಯನ್ನು ಸ್ವಾದೀನ ಮತ್ತು ಅನುಭವದಲ್ಲಿರುತ್ತದೆ ಬಿ.ಕೆ.ಚಿದಾಂಬರ ಶಾಸ್ತ್ರೀಯವರು ದಿನಾಂಕ 22-10-2014 ರಂದು ಮರಣ ಹೊಂದಿದ ನಂತರ ಸದರಿಯವರ ಧರ್ಮ ಪತ್ನಿ ಬಿ.ಕೆ. ಪಾರ್ವತಮ್ಮ ಗಂಡ ಬಿ.ಕೆ.ಚಿದಾಂಬರ ಶಾಸ್ತ್ರೀಯವರು ಪೋತಿ ಪಟ್ಟಕ್ಕೆ ಕೊಟ್ಟಿದನ್ನು ನನಗೆ ತಿಳಿದು ಬಂದಿರುತ್ತದೆ ಸದರಿ ಭೂಮಿಯನ್ನು ಪೋತಿ ಪಟ್ಟ ಬದಲಾಣೆ ಮಾಡಬಾರದೆಂದು ತಕರಾರು ಕೋಟ್ಟಿರುತ್ತೆನೆ ಸದರಿ ಪ್ರಕರಣದಲ್ಲಿ ನಾನು ಪ್ರತಿವಾದಿಯಾಗಿರುತ್ತೆನೆ ಪೋತಿ ಪಟ್ಟ ವನ್ನ ರದ್ದು ಪಡಿಸಿ ಸದರಿ ಭೂಮಿಯು ಭೂನ್ಯಾಯ ಮಂಡಳಿಯು ಕೊಟ್ಟೀರುವ ಅದಿಭೋಗದಾರನ ಪ್ರಕಾರ ಪಿ.ರಾಮರಾಜು ತಂದೆ ಪಿ.ನರಸಿಂಹರಾಜು ಎಂದು ಪಟ್ಟ ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಭೂನ್ಯಾಯ ಮಂಡಳಿಯು ಕೊಟ್ಟಿರುವ ಅದಿಭೋಗದಾರನ ಪ್ರಕಾರ ಪಿ.ರಾಮರಾಜು ತಂದೆ ಪಿ.ನರಸಿಂಹರಾಜು ಎಂದು ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ-

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬಲಕುಂದಿ ಗ್ರಾಮದ ಸರ್ವೇ ನಂಬರ್. 239ಬಿ/3 ವಿಸ್ತೀರ್ಣ 2.13 ಮತ್ತು 239/ಇ ವಿಸ್ತೀರ್ಣ 2.70 ಜಮೀನುಗಳು ಭೂನ್ಯಾಯ ಮಂಡಳಿಯು ಕೊಟ್ಟಿರುವ ಅದಿಭೋಗದಾರನ ಪ್ರಕಾರ ಪಿ.ರಾಮರಾಜು ತಂದೆ ಪಿ.ನರಸಿಂಹರಾಜು ಎಂದು ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

- ಈ ಆದೇಶವನ್ನು ದಿನಾಂಕ: 05-08-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಇದರ ಪ್ರತಿಯನ್ನು:
1.ವಾದಿ ಹಾಗೂ ಪ್ರತಿವಾದಿಗಳು.
2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ.
3 ...